All India Radio: Bangalore
National Bulletin In Kannada
12.10.2025  19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಬಿಹಾರ ವಿಧಾನಸಭೆ ಚುನಾವಣೆ ; ಮಿತ್ರಪಕ್ಷಗಳ ನಡುವೆ ಸ್ಥಾನ ಹಂಚಿಕೆ ಘೋಷಿಸಿದ ಎನ್‌ಡಿಎ
- ಇಸ್ರೇಲ್‌ಗೆ ಇಂದು ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಭೇಟಿ ; ಇಸ್ರೇಲ್-ಹಮಾಸ್ ನಡುವಿನ ಶಾಂತಿ ಒಪ್ಪಂದದ ಸಹಿ ಸಮಾರಂಭದಲ್ಲಿ ಭಾಗಿ
- ಪರ್ತ್‌ನಲ್ಲಿ ನಾಳೆಯಿಂದ ಭಾರತ-ಆಸ್ಟ್ರೇಲಿಯಾ ಜಂಟಿ ಮಿಲಿಟರಿ ಸಮರಾಭ್ಯಾಸ
- ಟೆಸ್ಟ್ ಕ್ರಿಕೆಟ್ ;  ಮೂರನೇ ದಿನದಾಟದಲ್ಲಿ ಭಾರತದ ವಿರುದ್ಧ ೯೭ ರನ್‌ಗಳ ಹಿನ್ನಡೆಯಲ್ಲಿ ವೆಸ್ಟ್ ಇಂಡೀಸ್

<><><><>

ಬಿಹಾರ ವಿಧಾನಸಭೆ ಚುನಾವಣೆಗೆ ಸ್ಥಾನ ಹಂಚಿಕೆಯನ್ನು ಎನ್‌ಡಿಎ ಘೋಷಿಸಿದೆ. ಬಿಜೆಪಿ ಮತ್ತು ಜೆಡಿಯು ತಲಾ ೧೦೧ ಸ್ಥಾನಗಳಲ್ಲಿ ಸ್ಪರ್ಧಿಸಲಿದೆ. ಇದೇ ವೇಳೆ ರಾಮ್‌ವಿಲಾಸ್ ಬಣದ ಲೋಕ ಜನಶಕ್ತಿ ಪಕ್ಷ ೨೯ ಸ್ಥಾನಗಳು ಹಾಗೂ ರಾಷ್ಟ್ರೀಯ ಲೋಕ ಮೋರ್ಚಾ ಹಿಂದೂಸ್ತಾನಿ ಅವಾಮ್ ಮೋರ್ಚಾ ತಲಾ ೬ ಸ್ಥಾನಗಳಲ್ಲಿ ಸ್ಪರ್ಧಿಸಲಿವೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಸಾಮಾಜಿಕ ಮಾಧ್ಯಮ ಪೋಸ್ಟ್ ಮೂಲಕ ತಿಳಿಸಿದ್ದಾರೆ. ನವದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಎನ್‌ಡಿಎ ಮಿತ್ರ ಪಕ್ಷಗಳ ಉನ್ನತ ನಾಯಕರ ಔಪಚಾರಿಕ ಮಾತುಕತೆಯ ನಂತರ ಈ ಘೋಷಣೆ ಹೊರಬಿದ್ದಿದೆ.

<><><><>

ಪಾಕಿಸ್ತಾನದ ಕಾಬೂಲ್‌ನಲ್ಲಿ ಇತ್ತೀಚೆಗೆ ಸಂಭವಿಸಿದ ಭಯೋತ್ಪಾದನಾ ಕೃತ್ಯವನ್ನು ಅಫ್ಘಾನ್ ತಾಲಿಬಾನ್ ಹೊಣೆ ಹೊತ್ತುಕೊಂಡಿದೆ. ಘಟನೆಯಲ್ಲಿ ೫೮ ಜನರು ಹತರಾಗಿದ್ದರು. ಅಫ್ಘಾನ್ ನೆಲೆಯಲ್ಲಿ ಪಾಕಿಸ್ತಾನ್ ನಡೆಸಿದ ವಾಯು ದಾಳಿಗೆ ಪ್ರತಿಕಾರವಾಗಿ ಈ ಕೃತ್ಯೆ ನಡೆಸಿರುವುದಾಗಿ

ತಾಲಿಬಾನ್ ಹೇಳಿಕೊಂಡಿದೆ. ಸೌದಿ-ಅರೇಬಿಯಾ ಮತ್ತು ಕತಾರ್ ಎರಡೂ ದೇಶಗಳು ಶಾಂತಿ ಸಂಯಮದಿಂದ ವರ್ತಿಸಬೇಕು ಹಾಗೂ ಶಾಂತಿ ಮಾತುಕತೆ ನಡೆಸಬೇಕು ಎಂದು ಆಗ್ರಹಿಸಿದೆ.

<><><><>

ಇಸ್ಕಾನ್ ಸಂಸ್ಥೆಯು ದೇಶಾದ್ಯಂತ 'ಉದ್ಭಾರ್-ನಶೆಮುಕ್ತ ಯುವ ಮತ್ತು ಸಂಸ್ಕಾರಯುಕ್ತ ಭಾರತ' ಅಭಿಯಾನವನ್ನು ಪ್ರಾರಂಭಿಸಿದೆ. ನಶೆ ಮುಕ್ತ ಭಾರತಕ್ಕಾಗಿ ಇಸ್ಕಾನ್ ಸಂಸ್ಥೆಯ ಈ ಪ್ರಯತ್ನಗಳಿಗಾಗಿ ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯಾ ಶ್ಲಾಘಿಸಿದ್ದಾರೆ. ನವದೆಹಲಿಯಲ್ಲಿ ಇಂದು ಇಸ್ಕಾನ್ ಆಯೋಜಿಸಿದ್ದ ಉದ್ಭಾರ್ ಯುವ ಜನೋತ್ಸವದಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಉಪಕ್ರಮದಡಿಯಲ್ಲಿ ೧೫ ಸಾವಿರಕ್ಕೂ ಹೆಚ್ಚು ಯುವಕರು, ಮಾದಕದ್ರವ್ಯಗಳಿಂದ ಮುಕ್ತರಾಗುವ ಪ್ರತಿಜ್ಞೆ ಮಾಡಿದ್ದಾರೆ ಎಂದು ತಿಳಿಸಿದರು. ಈ ಉಪಕ್ರಮವು ದೇಶದ ಲಕ್ಷಾಂತರ ಜನರನ್ನು ಮಾದಕದ್ರವ್ಯ ಮುಕ್ತರನ್ನಾಗಿ ಮಾಡುವುದು ಮತ್ತು ಅವರನ್ನು ವಿಕಸಿತ ಭಾರತ ಅಭಿಯಾನದಲ್ಲಿ ಸೇರಿಸಿಕೊಳ್ಳುವ ಗುರಿ ಹೊಂದಿದೆ ಎಂದು ಸಚಿವ ಮನ್ಸುಖ್ ಮಾಂಡವೀಯಾ ಹೇಳಿದರು.

ಧ್ವನಿ : ಮನ್ಸುಖ್ ಮಾಂಡವೀಯಾ ( ೨೧ ಸೆಕೆಂಡ್‌ಗಳು)

<><><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಂದು ಇಸ್ರೇಲ್ ಮತ್ತು ಈಜಿಪ್ಟ್‌ಗೆ ರಾಜತಾಂತ್ರಿಕ ಭೇಟಿ ನೀಡಲಿದ್ದಾರೆ. ಈ ವೇಳೆ ಅವರು, ಇಸ್ರೇಲ್ ಸಂಸತ್ ಉದ್ದೇಶಿಸಿ ಮಾತನಾಡಲಿದ್ದಾರೆ. ಅಲ್ಲದೇ ಗಾಜಾ ಶಾಂತಿ ಒಪ್ಪಂದದ ಸಹಿ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಇಸ್ರೇಲ್ ಮತ್ತು ಹಮಾಸ್ ಕದನ ವಿರಾಮ ಒಪ್ಪಂದ ಘೋಷಿಸಿದ ನಂತರ ಇಸ್ರೇಲ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೊದಲ ಭೇಟಿ ಇದಾಗಿದೆ. ಬಳಿಕ ಅವರು, ಈಜಿಪ್ಟ್‌ಗೆ ತೆರಳಲಿದ್ದಾರೆ. ಕೆಲವು ದಿನಗಳ ಹಿಂದೆ ೨೦ ಅಂಶಗಳ ಗಾಜಾ ಶಾಂತಿ ಒಪ್ಪಂದವನ್ನು ಅಮೆರಿಕ ಅಧ್ಯಕ್ಷರು ಘೋಷಿಸಿದರು.

<><><><>

ಆಸ್ಟ್ರೇಲಿಯಾದ ಪರ್ತ್‌ನಲ್ಲಿ ನಾಳೆ ಭಾರತ-ಆಸ್ಟ್ರೇಲಿಯಾ ಜಂಟಿ ಮಿಲಿಟರಿ ಸಮರಾಭ್ಯಾಸ 'ಅಸ್ತ್ರ ಹಿಂದ್-೨೦೨೫' ರ ೪ನೇ ಆವೃತ್ತಿ ಆರಂಭವಾಗಲಿದೆ. ಈ ತಿಂಗಳ ೨೬ರಂದು ಮುಕ್ತಾಯಗೊಳ್ಳಲಿರುವ ಈ ವಾರ್ಷಿಕ ಸಮರಾಭ್ಯಾಸದಲ್ಲಿ ಭಾರತೀಯ ಸೇನೆಯ ೧೨೦ ಸಿಬ್ಬಂದಿ

ಭಾಗವಹಿಸಲಿದ್ದಾರೆ. ಭಾರತೀಯ ಸೇನಾ ತುಕಡಿಯನ್ನು ಗೂರ್ಖಾ ರೈಫಲ್ಸ್‌ನ ಬೆಟಾಲಿಯನ್ ಮತ್ತು ಇತರೆ ಪಡೆಗಳ ಸೈನಿಕರು ನೇತೃತ್ವ ವಹಿಸಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ಸಮಾರಾಭ್ಯಾಸವು ಮರುಭೂಮಿ ಪ್ರದೇಶದಲ್ಲಿ ಜಂಟಿ ಕಾರ್ಯಾಚರಣೆಗಳ ಮೇಲೆ ಕೇಂದ್ರೀಕರಿಸುತ್ತದೆ. ಇದರಲ್ಲಿ ಪಡೆಗಳು ಜಂಟಿ ಯೋಜನೆ, ಯುದ್ಧತಂತ್ರದ ಕವಾಯತುಗಳು ಮತ್ತು ವಿಶೇಷ ಶಸ್ತ್ರಾಸ್ತ್ರ ಕೌಶಲ್ಯಗಳಿಂದ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತವೆ. ಕಾರ್ಯಾಚರಣೆಯ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಉದಯೋನ್ಮುಖ ತಂತ್ರಜ್ಞಾನಗಳನ್ನು ಸಂಯೋಜಿಸಲು ಮತ್ತು ಯುದ್ಧ ಪರಿಸ್ಥಿತಿಯಲ್ಲಿ ಜಂಟಿಯಾಗಿ ಕಾರ್ಯನಿರ್ವಹಿಸಲು ಇದು ಉತ್ತಮ ಅವಕಾಶ ಒದಗಿಸುತ್ತದೆ. ಅಲ್ಲದೇ ಭಾರತೀಯ ಮತ್ತು ಆಸ್ಟ್ರೇಲಿಯಾದ ಪಡೆಗಳ ನಡುವೆ ಸೌಹಾರ್ದತೆ ಬೆಳೆಯುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

<><><><>

ಇದೇ ತಿಂಗಳ ೧೪ ರಂದು ನವದೆಹಲಿಯಲ್ಲಿ ಭಾರತೀಯ ಸೇನೆ ವಿಶ್ವಸಂಸ್ಥೆಯ ಸದಸ್ಯ ಪಡೆಗಳ ನಾಯಕರ ಸಮಾವೇಶವನ್ನು ಆಯೋಜಿಸಿದೆ. ಮೂರು ದಿನಗಳ ಹಿರಿಯ ಮಿಲಿಟರಿ ನಾಯಕರ ಈ ಸಮಾವೇಶದಲ್ಲಿ ವಿಶ್ವಸಂಸ್ಥೆಯ ಶಾಂತಿ ಪಾಲನೆ ಕಾರ್ಯಾಚರಣೆಗೆ ಗಣನೀಯ ಕೊಡುಗೆ ನೀಡುತ್ತಿರುವ ೩೨ ಪ್ರಮುಖ ರಾಷ್ಟ್ರಗಳ ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ. ವಿಶ್ವಸಂಸ್ಥೆಯ ದೂರದರ್ಶಿತ್ವಕ್ಕೆ ಅತಿದೊಡ್ಡ ಕೊಡುಗೆದಾರ ದೇಶವಾಗಿ ಭಾರತ ಈ ಸಮಾವೇಶವನ್ನು ಆಯೋಜಿಸಿದ್ದು, ಭವಿಷ್ಯದ ಶಾಂತಿ ಪಾಲನೆಗಾಗಿ ಎದುರಾಗುವ ಸವಾಲುಗಳು, ಆತಂಕ ಮತ್ತು ಪರಸ್ಪರ ಉತ್ತಮ ಬಾಂಧವ್ಯಕ್ಕಾಗಿ ಉತ್ತಮ ನಡವಳಿಗಳ ಬಗ್ಗೆ ಚರ್ಚೆ ನಡೆಯಲಿದೆ. ವಸುದೈವ ಕುಟುಂಬಕಂ ನಂಬಿಕೆಯ ಪ್ರತಿಫಲನವಾಗಿ ಈ ಸಮಾವೇಶವನ್ನು ಆಯೋಜಿಸಲಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್, ವಿಶ್ವಸಂಸ್ಥೆಯ ಶಾಂತಿ, ಕಾರ್ಯಾಚರಣೆಗಳ ಕಾರ್ಯದರ್ಶಿ ಜೀನ್ ಪಿರೆ ಲ್ಯಾಕ್‌ರಾಯ್ಖ್ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಲಿದ್ದಾರೆ. ಅಲ್ಜೀರಿಯಾ, ಆಸ್ಟ್ರೇಲಿಯಾ, ಕಾಂಬೋಡಿಯಾ, ಫ್ರಾನ್ಸ್, ಇಟಲಿ, ಮಲೇಷಿಯಾ, ಪೋಲಾಂಡ್, ಶ್ರೀಲಂಕಾ, ಥೈಲ್ಯಾಂಡ್ ಮತ್ತು ವಿಯೇಟ್ನಾಂ ಸೇರಿ ಹಲವು ದೇಶಗಳ ಸೇನಾ ನಾಯಕರು ಸಮಾವೇಶದಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ.

<><><><>

ಪಶ್ಚಿಮ ಬಂಗಾಳದಲ್ಲಿ ಖಾಸಗಿ ವೈದ್ಯಕೀಯ ಕಾಲೇಜಿನ ೨ನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿನಿಯ ಮೇಲಿನ ಸಾಮೂಹಿಕ ಅತ್ಯಾಚಾರದ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ದುರ್ಗಾಪುರ ನ್ಯಾಯಾಲಯ ಇಂದು ೧೦ ದಿನಗಳ ಕಾಲ ಪೊಲೀಸ್ ವಶಕ್ಕೆ ಒಪ್ಪಿಸಿ ಆದೇಶಿಸಿದೆ. ಬಿಜ್ರಾ ಗ್ರಾಮದ ಶೇಖ್ ರಜ್ಜುದೀನ್, ಅಪು ಬೌರಿ ಮತ್ತು ಫಿರ್ದೋಸ್ ಶೇಖ್ ಬಂಧಿತರು. ಒಡಿಶಾ ಮೂಲದ ವಿದ್ಯಾರ್ಥಿನಿಯೊಬ್ಬಳು ಶುಕ್ರವಾರ ಸಂಜೆ ತನ್ನ ಸ್ನೇಹಿತೆಯೊಂದಿಗೆ ಕಾಲೇಜು ಕ್ಯಾಂಪಸ್‌ನಿಂದ ಹೊರಗೆ ಹೋಗಿದ್ದಾಗ ಸಾಮೂಹಿಕ ಅತ್ಯಾಚಾರ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ.

<><><>

ಇದೇ ತಿಂಗಳ ೧೫ರಂದು ಬಿಹಾರದಲ್ಲಿ ಬೂತ್ ಮಟ್ಟದ ಪಕ್ಷದ ಕಾರ್ಯಕರ್ತರೊಂದಿಗೆ ಪ್ರಧಾನಮಂತ್ರಿ ಮತ್ತು ಬಿಜೆಪಿ ಹಿರಿಯ ನಾಯಕ ನರೇಂದ್ರ ಮೋದಿ ಮಾತುಕತೆ ನಡೆಸಲಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿರುವ ಅವರು, 'ಮೆರಾ ಬೂತ್ ಸಬ್‌ಸೇ ಮಜ್ಬೂತ್' ಆಂದೋಲನದಲ್ಲಿ ಭಾಗಿಯಾಗಿ ತಮ್ಮ ಸಲಹೆಗಳನ್ನು ಹಂಚಿಕೊಳ್ಳುವಂತೆ ವಿನಂತಿಕೊಂಡಿದ್ದಾರೆ.

<><><>

ಹವಾಮಾನ ಬದಲಾವಣೆ ಜಗತ್ತಿನ ಸ್ವಾಭಾವಿಕ ವಿಶ್ವ ಪಾರಂಪರಿಕ ಸ್ಥಳಗಳಿಗೆ ದೊಡ್ಡ ಸವಾಲಾಗಿದ್ದು, ಅರ್ಧಕ್ಕೂ ಹೆಚ್ಚು ಪಾರಂಪರಿಕ ಸ್ಥಳಗಳು ತೊಂದರೆಗೊಳಗಾಗಿವೆ ಎಂದು ವರ್ಲ್ಡ್ ಹೆರಿಟೇಜ್ ಔಟ್‌ಲುಕ್ ವರದಿ ತಿಳಿಸಿದೆ. ಪ್ರಕೃತಿಯ ಉಳಿವಿಗಾಗಿನ ಅಂತಾರಾಷ್ಟ್ರೀಯ ಒಕ್ಕೂಟ ನಡೆಸಿದ ಅಧ್ಯಯನದ ಪ್ರಕಾರ, ವಾತಾವರಣ ಬದಲಾವಣೆಯಿಂದಾಗಿ ಶೇಕಡ ೪೩ ರಷ್ಟು ಪಾರಂಪರಿಕ ಸ್ಥಳಗಳು ನೇರವಾಗಿ ಪರಿಣಾಮ ಎದುರಿಸುತ್ತಿದ್ದು, ಕಾಡುಪ್ರಾಣಿ ಮತ್ತು ಸಸ್ಯಜನ್ಯ ರೋಗಗಳು ಪರಿಣಾಮ ಬೀರುತ್ತಿವೆ ಎಂದು ಅಬುದಾಬಿಯಲ್ಲಿ ಬಿಡುಗಡೆಗೊಳಿಸಲಾದ ಔಟ್‌ಲುಕ್-೪ ರ ಆವೃತ್ತಿಯ ವರದಿ ತಿಳಿಸಿದೆ. ವಿಶ್ವ ಪಾರಂಪರಿಕ ತಾಣಗಳ ರಕ್ಷಣೆ ವಿಶೇಷ ಸ್ಥಳಗಳ ಕಾಳಜಿಯಷ್ಟೇ ಅಲ್ಲ, ಜೀವನ, ಸಂಸ್ಕೃತಿ ಮತ್ತು ಅಸ್ತಿತ್ವದ ರಕ್ಷಣೆಯೂ ಆಗಿದೆ ಎಂದು ಪರಿಸರ ರಕ್ಷಣೆಗೆ ಅಂತಾರಾಷ್ಟ್ರೀಯ ಒಕ್ಕೂಟ ಮುಖ್ಯಸ್ಥ ಗ್ರೆಥೆಲ್ ಅಗ್ಯುಲಾರ್ ತಿಳಿಸಿದ್ದಾರೆ.

<><><>

ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಮಂದಂಗಢ್ ತಾಲೂಕಿನಲ್ಲಿ ನೂತನ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯದ ಕಟ್ಟಡವನ್ನು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ

ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸುಲಭವಾಗಿ ಲಭ್ಯವಾಗಬೇಕು. ನೂತನ ಕಟ್ಟಡವು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದ್ದು, ಇದು ವೇಗವಾಗಿ ಮತ್ತು ಹೆಚ್ಚು ಕೈಗೆಟಕುವಂತೆ ನ್ಯಾಯದಾನವನ್ನು ಸಕ್ರಿಯಗೊಳಿಸುತ್ತದೆ. ಇದರಿಂದಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಾನತೆಯ ದೃಷ್ಟಿಕೋನವನ್ನು ಜೀವಂತಗೊಳಿಸುತ್ತವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ್, ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಭಾಗವಹಿಸಿದ್ದರು.

<><><><>

ನವದೆಹಲಿಯ ಅರುಣ್ ಜೇಟ್ಲಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ-ವೆಸ್ಟ್ ಇಂಡೀಸ್ ನಡುವಿನ ಟೆಸ್ಟ್ ಸರಣಿಯ ೨ನೇ ಮತ್ತು ಅಂತಿಮ ಪಂದ್ಯದ ೩ನೇ ದಿನದಾಟದ ಅಂತ್ಯದಲ್ಲಿ ವೆಸ್ಟ್ ಇಂಡೀಸ್ ತನ್ನ ೨ನೇ ಇನ್ನಿಂಗ್ಸ್‌ನಲ್ಲಿ ೨ ವಿಕೆಟ್‌ಗಳಿಗೆ ೧೭೩ ರನ್ ಗಳಿಸಿದೆ. ಈ ಮೂಲಕ ವೆಸ್ಟ್ ಇಂಡೀಸ್ ೯೭ ರನ್‌ಗಳ ಹಿನ್ನಡೆ ಅನುಭವಿಸಿದೆ. ಇದಕ್ಕೂ ಮುನ್ನ ವೆಸ್ಟ್ ಇಂಡೀಸ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೨೪೮ ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಇದರೊಂದಿಗೆ ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ ೨೭೦ ರನ್‌ಗಳ ಮುನ್ನಡೆ ದಾಖಲಿಸಿದೆ. ಈ ಮೂಲಕ ವೆಸ್ಟ್ ಇಂಡೀಸ್ ತಂಡದ ಮೇಲೆ  ಭಾರತ ಫಾಲೋಆನ್ ಹೇರಿದೆ. ಭಾರತ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೫ ವಿಕೆಟ್‌ಗಳಿಗೆ ೫೧೮ ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು.

<><><><>

ವಿಶಾಖಪಟ್ಟಣದಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್‌ನಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡ, ಬೌಲಿಂಗ್ ಆಯ್ಕೆ ಮಾಡಿಕೊಂಡಿದೆ. ಮೊದಲು ಬ್ಯಾಟಿಂಗ್ ಮಾಡಿದ ಭಾರತ, ೪೮.೫ ಓವರ್‌ಗಳಲ್ಲಿ ೩೩೦ ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು. ಗೆಲುವಿನ ಗುರಿ ಬೆನ್ನತ್ತಿದ್ದ ಆಸ್ಟ್ರೇಲಿಯಾ, ಇತ್ತೀಚಿನ ವರದಿ ಬಂದಾಗ, ೧೦.೪ ಓವರ್‌ಗಳಲ್ಲಿ ಯಾವುದೇ ವಿಕೆಟ್ ನಷ್ಟವಿಲ್ಲದೇ ೮೩ ರನ್ ಗಳಿಸಿ ಆಡುತ್ತಿದೆ.

<><><><>

ಮಲೇಷಿಯಾದ ಜೋಹಾರ್ ಬಹ್ರುನಲ್ಲಿ ನಡೆಯುತ್ತಿರುವ ಸುಲ್ತಾನ್ ಜಹೋರ್ ಕಪ್ ಕಿರಿಯರ ಪುರುಷರ ಹಾಕಿ ಪಂದ್ಯಾವಳಿ - ೨೦೨೫ರಲ್ಲಿ ಭಾರತ, ನ್ಯೂಜಿಲೆಂಡ್ ಅನ್ನು ೪-೨ ಅಂತರದಲ್ಲಿ

ಪರಾಭವಗೊಳಿಸಿದೆ. ಭಾರತದ ಪರ ಹರ್ಷದೀಪ್ ಸಿಂಗ್, ಪಿ.ಬಿ.ಸುನೀಲ್, ಅರೈಜಿತ್ ಸಿಂಗ್ ಹುಂಡಾಲ್ ಮತ್ತು ರೋಶಾನ್ ಕುಜೂರ್ ತಲಾ ೧ ಗೋಲು ಗಳಿಸಿದರೆ ತೀವ್ರ ಪೈಪೋಟಿ ನೀಡಿದ ನ್ಯೂಜಿಲೆಂಡ್ ಪರವಾಗಿ ನಾಯಕ ಗಸ್ ನೆಲ್ಸನ್ ಮತ್ತು ಎಡೇನ್ ಬಾಕ್ಸ್ ತಲಾ ೧ ಗೋಲು ಗಳಿಸಿದರು. ಇನ್ನೊಂದು ಪಂದ್ಯದಲ್ಲಿ ಮಲೇಷಿಯಾವನ್ನು ೭-೨ ಅಂತರದಲ್ಲಿ ಪಾಕಿಸ್ತಾನ ಪರಾಭವಗೊಳಿಸಿದೆ. ಮಂಗಳವಾರ ಪಂದ್ಯದಲ್ಲಿ ಭಾರತ, ಪಾಕಿಸ್ತಾನ ಹಾಕಿ ತಂಡವನ್ನು ಎದುರಿಸಲಿದೆ.

<><><><>

ನಾರ್ವೆಯ ಫೋರ್ಡ್‌ನಲ್ಲಿ ನಡೆದ ೨೦೨೫ ರ ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನ ಅಂತಿಮ ದಿನದಂದು ಭಾರತದ ಲವ್‌ಪ್ರೀತ್ ಸಿಂಗ್ ಪುರುಷರ ೧೧೦ ಕೆಜಿ ಪ್ಲಸ್ ವಿಭಾಗದಲ್ಲಿ ಎಂಟನೇ ಸ್ಥಾನ ಪಡೆದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>